**Code No. 16 X**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರವೀಣ ದರ್ಜೆ — ಪ್ರಥಮ ಪತ್ರಿಕೆ

## (ವೇಗ)

ಜೂನ್, 2016

ವೇಳೆ { ಉಕ್ತಲೇಖನ : 7 ನಿಮಿಷಗಳು
ಲಿಪಿ ಬರಹ : 1 ಗಂಟೆ 45 ನಿಮಿಷಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಮುನ್ನೂರು (300) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಅವರ ಶೀಘ್ರಲಿಪಿಯನ್ನು ಕನ್ನಡ ಲಿಪಿಗೆ ಪರಿವರ್ತನೆ ಮಾಡಿ ಬರೆಯಲು ಸೂಚಿಸತಕ್ಕದ್ದು.

---

ಸನ್ಮಾನ್ಯ ಸಭಾಧ್ಯಕ್ಷರೇ,

ನಾನು ಈ ಸಾಲಿನ ಆಯವ್ಯಯವನ್ನು ಮಂಡಿಸುತ್ತಿದ್ದೇನೆ. ದೇಶದಲ್ಲಿ ಬದಲಾಗಿರುವ ರಾಜಕೀಯ ವಿದ್ಯಾಮಾನಗಳ ನಡುವೆಯೂ ಸಾಮಾಜಿಕ ನ್ಯಾಯ, ಜಾತ್ಯಾತೀತ ನಂಬಿಕೆ

$\frac{1}{4}$ ಮತ್ತು ಕೋಮು ಸೌಹಾರ್ದತೆ ತತ್ವಗಳಿ/ಗೆ ಬದ್ಧವಾಗಿರುವ ನಮ್ಮ ಸರ್ಕಾರದ ನಡೆ–ನುಡಿಗಳಲ್ಲಿ, ಆದ್ಯತೆಗಳಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ. ರಾಜ್ಯದ ಜನತೆಯ ಸುರಕ್ಷತೆ ಮತ್ತು ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡು ಕೋಮು ಸೌಹಾರ್ದತೆ

$\frac{1}{2}$ ಮತ್ತು ಸಮನ್ವ/ಯತೆಗೆ ಹೆಚ್ಚಿನ ಒತ್ತು ನೀಡಿ ರಾಜ್ಯವನ್ನು ಪ್ರಗತಿ ಪಥದಲ್ಲಿ ಮುನ್ನಡೆಸುತ್ತೇವೆ ಎನ್ನುವ ಭರವಸೆಯನ್ನು ನಾನು ಈ ಗೌರವಾನ್ವಿತ ಸದಸನಕ್ಕೆ ಮತ್ತೊಮ್ಮೆ ನೀಡಬಯಸುತ್ತೇನೆ. ಇದು ನಮ್ಮ ಸರ್ಕಾರ ಮಂಡಿಸುತ್ತಿರುವ

ಮೂರನೇ ಆ/ಯವ್ಯಯ ಪತ್ರ. ಪ್ರಥಮ $\frac{3}{4}$

ಆಯವ್ಯಯ ಪತ್ರದಲ್ಲಿ ನಾವು ಹಲವಾರು ನೂತನ ಯೋಜನೆಗಳನ್ನು ಘೋಷಿಸಿದ್ದೆವು. ಆ ಯೋಜನೆಗಳೆಲ್ಲ ಈಗ ಪೂರ್ಣಫಲ ನೀಡುತ್ತಿವೆ. ಇವುಗಳ ಯಶಸ್ಸನ್ನು ಆಧರಿಸಿ ಎರಡನೇ

ಆಯವ್ಯಯ ಪತ್ರXದಲ್ಲಿ ಯೋಜನೆಗಳನ್ನು 1

ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೊಳಿಸಿದೆವು. ಪ್ರಸ್ತುತ ಆಯವ್ಯಯ

[ Turn over

ಪತ್ರದಲ್ಲಿ ನಾವು ಈ ಯಶಸ್ವಿ ಯೋಜನೆಗಳನ್ನು
ಇನ್ನಷ್ಟು ಸದೃಢಪಡಿಸಿ, ಹೆಚ್ಚು ವ್ಯಾಪಕಗೊಳಿಸಿ
$\frac{1}{4}$ ಯೋಜನೆಗಳು ದೀರ್ಘಕಾಲ ಉ/ಳಿಯುವಂತೆ
ಕ್ರಮಕೈಗೊಂಡಿದ್ದೇವೆ.

ಮಾನ್ಯ ಸದಸ್ಯರಿಗೆಲ್ಲ ತಿಳಿದಿರುವಂತೆ
ಸರ್ವರನ್ನು ಒಳಗೊಂಡ ಸಮಗ್ರ ಅಭಿವೃದ್ಧಿ ನಮ್ಮ
ಸರ್ಕಾರದ ಸಂಕಲ್ಪ. ಎಲ್ಲಾ ಜನ ಸಮುದಾಯದ
ಸುರಕ್ಷತೆ ನಮ್ಮ ಬದ್ಧತೆ. ಸಾಮಾಜಿಕ ನ್ಯಾಯ
$\frac{1}{2}$ ನಮ್ಮ/ ಧ್ಯೇಯ. ಕೃಷಿಕರ ಕಲ್ಯಾಣವೇ ನಮ್ಮ
ಕಾಳಜಿ. ಗ್ರಾಮೀಣಾಭಿವೃದ್ಧಿಯೇ ನಮ್ಮ ಆಧ್ಯತೆ.
ನಗರ ಪ್ರದೇಶಗಳ ಮೂಲ ಸೌಲಭ್ಯ ಸುಧಾರಣೆ
ನಮ್ಮ ಮನ್ನಣೆ. ಕನ್ನಡ ನಾಡು–ನುಡಿಯ
ಪೋಷಣೆ ಮತ್ತು ಸಂರಕ್ಷಣೆ ನಮ್ಮ ಹೊಣೆ.
$\frac{3}{4}$ ಆಡಳಿತದ/ಲ್ಲಿ ಪಾರದರ್ಶಕತೆ ಮತ್ತು
ತಂತ್ರಜ್ಞಾನದ ಅಳವಡಿಕೆ–ಇವು ನಮ್ಮ
ಕಾರ್ಯವಿಧಾನವಾಗಿದೆ. ಸಾಮಾಜಿಕ ನ್ಯಾಯದ
ತತ್ವವೇ ನಮ್ಮ ಸರ್ಕಾರದ ತಳಹದಿ. ರಾಜ್ಯದ
ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿ
2 ಯೋಜನೆಗXಳ ನೀತಿ ನಿರೂಪಣೆಗೆ ಸಾಮಾಜಿಕ
ನ್ಯಾಯದ ಎಳೆಗಳೇ ಆಧಾರ. ಪರಿಶಿಷ್ಟ ಜಾತಿ
ಮತ್ತು ಪರಿಶಿಷ್ಟ ಪಂಗಡದವರ, ಹಿಂದುಳಿದವರ,
ದುರ್ಬಲ ವರ್ಗದವರ, ಅಲ್ಪಸಂಖ್ಯಾತರ,
ಕೃಷಿಕರ, ಮಹಿಳೆಯರ ರಕ್ಷಣೆ ನಮ್ಮ
ಪ್ರ/ಥಮ ಆದ್ಯತೆಯಾಗಿದೆ. ಈ ನಿಟ್ಟಿನಲ್ಲಿ $\frac{1}{4}$
ನಮ್ಮ ಸರ್ಕಾರದ ಬದ್ಧತೆಗಳು ನಾವು ಅಧಿಕಾರ
ಸ್ವೀಕರಿಸಿದ ಮರುಕ್ಷಣವೇ ಸಾಬೀತುಗೊಂಡಿವೆ.
ಅಧಿಕಾರ ಸ್ವೀಕರಿಸಿದ ದಿನವೇ ನಾವು
ಘೋಷಿಸಿದ 'ಅನ್ನಭಾಗ್ಯ' ಯೋಜನೆಯು
ಹಸಿವು/ ಮುಕ್ತ ಕರ್ನಾಟಕದ ಆಶಯವನ್ನು $\frac{1}{2}$
ಹೊಂದಿದೆ. 'ಋಣಮುಕ್ತ' ಯೋಜನೆಯು
ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು
ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ
ಸಮುದಾಯದ ಫಲಾನುಭವಿಗಳನ್ನು
ಋಣಮುಕ್ತರನ್ನಾಗಿಸಿದೆ./ 'ವಸತಿಭಾಗ್ಯ' $\frac{3}{4}$
ಯೋಜನೆಯು ದುರ್ಬಲವರ್ಗದವರ ಮನೆ
ನಿರ್ಮಾಣದ ಕನಸನ್ನು ನನಸಾಗಿದೆ.
'ಕ್ಷೀರಧಾರೆ' ಯೋಜನೆಯು ಸಹಕಾರಿ ಹಾಲು
ಉತ್ಪಾದಕರಿಗೆ ಹೆಚ್ಚಿನ ಪ್ರೋತ್ಸಾಹ ಒದಗಿಸಿದೆ.
ಪರಿಶಿಷ್ಟ ಜಾತಿ ಮತ್ತು ಪರಿಶಿXಷ್ಟ ಪಂಗಡದ 3
ಅಭ್ಯುದಯ ನಮ್ಮ ಸರ್ಕಾರದ ಪರಮ
ಧ್ಯೇಯ. ಈ ಜನಸಮುದಾಯದ ಜನಸಂಖ್ಯೆಗೆ
ಅನುಗುಣವಾಗಿ ಯೋಜನಾ ವೆಚ್ಚವನ್ನು
ಹಂಚಿಕೆ ಮಾಡಿ ಅದನ್ನು ಪೂರ್ಣವಾಗಿ ವೆಚ್ಚ
ಮಾಡಲು ಅನುವಾಗುವಂತೆ ಕರ್ನಾಟಕ

$\frac{1}{4}$ ಅನು/ಸೂಚಿತ ಜಾತಿಗಳ ಉಪಯೋಜನೆ
ಮತ್ತು ಬುಡಕಟ್ಟು ಉಪಯೋಜನೆ
ಅಧಿನಿಯಮ 2013ನ್ನು ಜಾರಿಗೊಳಿಸಿದ್ದೇವೆ.
ಈ ಸಮುದಾಯದ ಅಭಿವೃದ್ಧಿಗಾಗಿ ಇನ್ನಷ್ಟು
ಕಾರ್ಯಕ್ರಮಗಳನ್ನು ನಾನು ಈ
$\frac{1}{2}$ ಆಯವ್ಯಯದಲ್ಲಿ ಆಳವಡಿ/ಸಿದ್ದೇನೆ.

ನಮ್ಮ ಸರ್ಕಾರವು ವಿವಿಧ
ಜನಸಮುದಾಯದ ಅಭಿವೃದ್ಧಿಗಾಗಿ
ಬದ್ಧತೆಯಿಂದ ಜಾರಿಗೆ ತಂದಿರುವ ಹಲವಾರು
ಯೋಜನೆಗಳು ಇಂದು ಉದ್ದೇಶಿತ
ಜನಸಮುದಾಯವನ್ನು ತಲುಪಿ ಅವರಲ್ಲಿ
$\frac{3}{4}$ ನೆಮ್ಮದಿ ಮತ್ತು ಸಂತಸ/ವನ್ನು ಮೂಡಿಸಿವೆ.
ಮಳೆ ಆಶ್ರಿತ ಬೇಸಾಯವನ್ನು ಕೇಂದ್ರೀಕರಿಸಿ
ನಾವು ರೂಪಿಸಿದ್ದ 'ಕೃಷಿಭಾಗ್ಯ' ಯೋಜನೆ
ಒಣಭೂಮಿ ರೈತರಲ್ಲಿ ಹೊಸ ಚೈತನ್ಯ ಚಿಮ್ಮಿಸಿದೆ.
ಕೃಷಿ ಮಾರುಕಟ್ಟೆ ಮಂಡಳಿಯಲ್ಲಿ
4 ಜಾರಿಗೊಂಡಿರುವ ಆನ್‌ಲೈನ್ ಹರಾಜುX
ಪದ್ಧತಿಯು ರಾಷ್ಟ್ರೀಯ ಮನ್ನಣೆ ಗಳಿಸಿದ್ದು, ಕೃಷಿ
ಉತ್ಪನ್ನಗಳಿಗೆ ಉತ್ತಮ ಬೆಲೆ ಒದಗಿಸಿ, ರೈತರಲ್ಲಿ
ಹರುಷದ ಹೊನಲು ಹರಿಸಿದೆ. ಹಿಂದುಳಿದ
ವರ್ಗಗಳ ವಿದ್ಯಾರ್ಥಿಗಳಿಗೆ ಊಟ, ವಸತಿ
$\frac{1}{4}$ ಕಲ್ಪಿಸುವ 'ವಿದ್ಯಾಸಿರಿ' ಯೋಜ/ನೆ ನಿರೀಕ್ಷೆಗೂ
ಮೀರಿ ಯಶಸ್ವಿಯಾಗಿ ವಿದ್ಯಾರ್ಥಿಗಳಲ್ಲಿ ಸಂತಸ
ಮೂಡಿಸಿದೆ. ರಾಷ್ಟ್ರದಲ್ಲೇ ಪ್ರಥಮವಾಗಿ ನಮ್ಮ
ಸರ್ಕಾರ ಬಡತನ ರೇಖೆಗಿಂತ ಮೇಲಿರುವ
ಕುಟುಂಬಗಳಿಗೂ ಅನ್ವಯವಾಗುವಂತೆ ರೂಪಿಸಿ
ಅನುಷ್ಠಾನಗೊಳಿಸಿರು/ವ 'ರಾಜೀವ್ ಆರೋಗ್ಯ $\frac{1}{2}$
ಭಾಗ್ಯ' ಯೋಜನೆ ಎಲ್ಲರಿಗೂ ಆರೋಗ್ಯ ಸುರಕ್ಷೆ
ಒದಗಿಸಿದೆ.

ಗ್ರಾಮೀಣ ಅಭಿವೃದ್ಧಿಗಾಗಿ ನಮ್ಮ
ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳು
ರಾಷ್ಟ್ರಮಟ್ಟದಲ್ಲಿ ಪ್ರಶಂಸೆಗೆ ಪಾತ್ರವಾಗಿದ್ದು,
ಶೌಚಾಲಯ ನಿರ್ಮಾಣದ/ಲ್ಲಿ ಕರ್ನಾಟಕ $\frac{3}{4}$
ರಾಜ್ಯವು ರಾಷ್ಟ್ರದಲ್ಲಿಯೇ ಪ್ರಥಮ ಸ್ಥಾನ
ಪಡೆದಿದೆ. ವಿದ್ಯುತ್ ವಲಯದಲ್ಲಿನ ವಿಶಿಷ್ಟ
ಸಾಧನೆಗಾಗಿ ಕರ್ನಾಟಕಕ್ಕೆ ರಾಷ್ಟ್ರೀಯ ಮನ್ನಣೆ
ಸಿಕ್ಕಿದೆ. 'ಕರ್ನಾಟಕ ಮೊಬೈಲ್ ಒನ್' ಮೂಲಕ
ನಮ್ಮ ಸರ್ಕಾರವು 'ಅಂಗೈನಲ್ಲಿX ಆಡಳಿತ' 5
ಎನ್ನುವ ಜನಸ್ನೇಹಿ ಪರಿಕಲ್ಪನೆಯನ್ನು
ಜಾರಿಗೊಳಿಸಿ ಸಾವಿರಾರು ಸೇವೆಗಳನ್ನು
ಜನಸಾಮಾನ್ಯರ ಬೆರಳ ತುದಿಗೆ ತಲುಪಿಸಿ ಇಡೀ
ರಾಷ್ಟ್ರದ ಗಮನ ಸೆಳೆದಿದೆ. ಕೈಗಾರಿಕಾ
ಬೆಳವಣಿಗೆಗೆ ಬದ್ಧವಾಗಿರುವ/ ನಮ್ಮ ಸರ್ಕಾರವು $\frac{1}{4}$
ಉದ್ಯಮ ಸ್ನೇಹಿಯಾದ ಹೊಸ ಕೈಗಾರಿಕಾ

ನೀತಿಯನ್ನು ಜಾರಿಗೊಳಿಸಿದೆ. ಉದ್ಯಮಿಗಳು
ಕೈಗಾರಿಕೆಗೆ ಅಗತ್ಯವಾದ ಜಮೀನನ್ನು
ಸುಲಭವಾಗಿ ಪಡೆದುಕೊಳ್ಳಲು ಅನುವಾಗುವಂತೆ
$\frac{1}{2}$ ಕಂದಾಯ ಕಾಯ್ದೆಗಳಿಗೆ ಅಗ/ತ್ಯ
ತಿದ್ದುಪಡಿಯನ್ನು ಮಾಡಲಾಗಿದೆ. ಹಿಂದುಳಿದ
ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವವರನ್ನು
ಪ್ರೋತ್ಸಾಹಿಸಲು ಅವರುಗಳಿಗೆ ವಿಶೇಷ
ರಿಯಾಯಿತಿಗಳನ್ನು ನೀಡಲಾಗಿದೆ.

ನಮ್ಮದು ನುಡಿದಂತೆ ನಡೆಯುವ
$\frac{3}{4}$ ಸರ್ಕಾ/ರ. ನಾವು ಜನತೆಗೆ ನೀಡಿರುವ
ವಚನದಂತೆ ಪ್ರತಿ ವರ್ಷ ನೀರಾವರಿ ವಲಯಕ್ಕೆ
ಹತ್ತು ಸಾವಿರ ಕೋಟಿ ರೂಪಾಯಿಗಳನ್ನು
ಒದಗಿಸಿ ನಮ್ಮ ವಚನವನ್ನು ಈಡೇರಿಸಿದ್ದೇವೆ.
ಪ್ರತಿ ವರ್ಷ ಮೂರು ಲಕ್ಷಕ್ಕಿಂತಲೂ ಹೆಚ್ಚು
6 ಮನೆಗಳXನ್ನು ನಿರ್ಮಿಸಿ, ನಮ್ಮ ಮಾತನ್ನು
ಉಳಿಸಿಕೊಂಡಿದ್ದೇವೆ. ಕ್ಷೀರಭಾಗ್ಯ ಯೋಜನೆಯ
ಮೂಲಕ ಶಾಲಾ ಮಕ್ಕಳ ಪೌಷ್ಟಿಕತೆಯನ್ನು
ಹೆಚ್ಚಿಸಿದ್ದೇವೆ. ಹತ್ತಾರು ವರ್ಷಗಳಿಂದ
ಉಳಿದಿದ್ದ ಬಾಕಿ ಆಶ್ರಯ ಮನೆ ಫಲಾನುಭವಿಗಳ
ಸಾಲವನ್ನು ಮನ್ನಾ/ ಮಾಡಿ ಅವರೆಲ್ಲರನ್ನೂ $\frac{1}{4}$
ಋಣಮುಕ್ತರನ್ನಾಗಿಸಿದ್ದೇವೆ. ರಾಜ್ಯದ
ಪ್ರತಿಯೊಬ್ಬರ ಸಾಮಾಜಿಕ ಮತ್ತು ಶೈಕ್ಷಣಿಕ
ಸ್ಥಿತಿಗತಿಗಳನ್ನು ಅರಿಯಲು ಸಮೀಕ್ಷೆಯನ್ನು
ಕೈಗೊಂಡಿದ್ದು ಈ ಸಮೀಕ್ಷೆಯಿಂದ
ಹೊರಹೊಮ್ಮುವ ಫಲಿತಾಂಶಗಳನ್ನು ಆಧ/ರಿಸಿ $\frac{1}{2}$
ಹಿಂದುಳಿದವರ ಅಭಿವೃದ್ಧಿಗಾಗಿ ಸೂಕ್ತ
ಯೋಜನೆಗಳನ್ನು ರೂಪಿಸಲಾಗುವುದು.

ನಮ್ಮ ಸರ್ಕಾರವು ಕೃಷಿ ವಲಯಕ್ಕೆ
ಸಂಬಂಧಿಸಿದಂತೆ ಪ್ರತಿ ವರ್ಷ ನೀಡುತ್ತಿರುವ
ಬೆಂಬಲವನ್ನು ಈ ವರ್ಷವೂ ತನ್ನ ಸಂಪೂರ್ಣ
ಬೆಂಬಲವ/ನ್ನು ಮುಂದುವರಿಸುತ್ತದೆ. ರಾಜ್ಯದ $\frac{3}{4}$
ಹಲವಾರು ತಾಲ್ಲೂಕುಗಳಲ್ಲಿನ ಬರಪರಿಸ್ಥಿತಿಯ
ಹಿನ್ನೆಲೆಯಲ್ಲಿಯೂ ಪ್ರಸಕ್ತ ಸಾಲಿನಲ್ಲಿ ಕೃಷಿ
ವಲಯವು ಶೇಕಡ ಐದರ ಬೆಳವಣಿಗೆಯನ್ನು
ಸಾಧಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.X 7